# ಅಮೆರಿಕದಲ್ಲಿ ಸ್ವಾಮಿ ವಿವೇಕಾನಂದರು

ಆಂಗ್ಲ ಮೂಲ : **ಮೇರಿ ಲೂಯಿ ಬರ್ಕ್**

ಸಂಗ್ರಹಾನುವಾದ : **ಸ್ವಾಮಿ ವೀರೇಶಾನಂದ**

## ಭಾಗ ೨೩

### ಡೆಟ್ರಾಯ್ಟ್‌ನಲ್ಲಿ ಸ್ವಾಮಿ ವಿವೇಕಾನಂದರು (ಮುಂದುವರಿದ ಭಾಗ)

**ಸ್ವಾ**ಮಿ ವಿವೇಕಾನಂದರು ಡೆಟ್ರಾಯ್ಟ್ ನಗರದಲ್ಲಿ ಇದ್ದಾರೆ. ಅವರ ವಿರುದ್ಧ ಅನೇಕ ಜನರು ಕಟುಟೀಕೆಗಳನ್ನು ಮಾಡುತ್ತಿದ್ದಾರೆ. ಪ್ರತಿಷ್ಠಿತ ಕ್ರೈಸ್ತ ಬಿಷಪ್ ನಿಂದೆ ಅವರು ಸ್ವಾಮೀಜಿಯವರ ಬಗೆಗಿನ ಸಂಬಂಧವನ್ನು ಕಡಿದುಕೊಂಡು, ಪತ್ರಿಕೆಗೆ ಒಂದು ಪತ್ರವನ್ನು ಕೂಡ ಬರೆದರು. ಇದಕ್ಕೆ ಪರ ಮತ್ತು ವಿರುದ್ಧವಾದ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತ, ಹಲವಾರು ಜನರು ಪತ್ರಗಳನ್ನು ಬರೆಯಲು ಆರಂಭಿಸಿದರು. ಬಿಷಪ್ ಅವರ ಪತ್ರದಿಂದ ಪ್ರಭಾವಿತಗೊಂಡು ಹಲವಾರು ವರದಿಗಾರರು ಸ್ವಾಮೀಜಿಯವರ ಎರಡನೆಯ ಪ್ರವಚನವನ್ನು ತಪ್ಪುತಪ್ಪಾಗಿ ವರದಿ ಮಾಡಲು ಆರಂಭಿಸಿದರು.

ಇಂಥ ಒಂದು ವರದಿಯು 'ಫ್ರೀ ಪ್ರೆಸ್ ಜರ್ನಲ್' ಪತ್ರಿಕೆಯಲ್ಲಿ ಪ್ರಕಟವಾಯಿತು. ಅದರಲ್ಲಿ ಸ್ವಾಮೀಜಿಯವರು ಕ್ರೈಸ್ತ ಧರ್ಮವನ್ನು ಟೀಕಿಸಿರುವುದನ್ನು ಪ್ರಮುಖವಾಗಿ ಬಿಂಬಿಸಲಾಯಿತು. ಭಾಷಣದ ವಿಷಯವಾದ ಹಿಂದೂ ತತ್ತ್ವಶಾಸ್ತ್ರದ ಬಗ್ಗೆ ಸ್ವಾಮೀಜಿ ಮಾತನಾಡಿದ್ದು ಕಡಿಮೆ ಎಂದು ಟೀಕಿಸಲಾಯಿತು. ಆದರೆ ಟ್ರೈಬ್ಯೂನ್ ಪತ್ರಿಕೆಯು ಸ್ವಾಮೀಜಿಯವರನ್ನು ಬೆಂಬಲಿಸಿತು. ಆದರೂ ಅದರ ವರದಿಗಾರನಿಗೆ ಸ್ವಾಮೀಜಿಯವರ ಭಾಷಣವನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಆಗಲಿಲ್ಲ. ಫೆಬ್ರವರಿ ೧೬, ೧೮೯೪ರ ತನ್ನ ಸಂಚಿಕೆಯಲ್ಲಿ ಟ್ರೈಬ್ಯೂನ್ ಪತ್ರಿಕೆಯು ಹೀಗೆ ವರದಿಮಾಡಿತು:

''ಸ್ವಾಮಿ ವಿವೇಕಾನಂದರು ಹಿಂದಿನ ರಾತ್ರಿ ಯುನಿಟೇರಿಯನ್ ಚರ್ಚಿನಲ್ಲಿ ಹಿಂದೂ ತತ್ತ್ವಶಾಸ್ತ್ರದ ಬಗ್ಗೆ ಮಾತನಾಡಿದರು. ಕೆಲವು ಕಾಲ ಅವರು ತತ್ತ್ವಶಾಸ್ತ್ರ ಮತ್ತು ಅತೀಂದ್ರಿಯ ಶಾಸ್ತ್ರಗಳನ್ನು ಕುರಿತು ವಿವರಿಸಿದರು. ತಮ್ಮ ಭಾಷಣದ ವಿಷಯ ಧಾರ್ಮಿಕ ವಿಚಾರಗಳಿಗೆ ಸಂಬಂಧಪಟ್ಟದ್ದು ಎಂದು ಅವರು ಹೇಳಿದರು. ಇದಲ್ಲದೆ, ಯಾರು ಆತ್ಮವನ್ನು ನಂಬುವುದಿಲ್ಲವೋ, ಅಂಥ ಬೌದ್ಧಧರ್ಮದ ಬಗ್ಗೆ ಮಾತನಾಡಿದರು. ಬೌದ್ಧಧರ್ಮವು ಒಂದು ನೈತಿಕ ಧರ್ಮ. ಆದರೆ ಈ ಧರ್ಮದಲ್ಲಿ ದೇವರ ಕಲ್ಪನೆಗೆ ಅವಕಾಶವಿಲ್ಲ. ಹಾಗೆಯೇ ಇನ್ನೊಂದು ಪಂಥವಾದ ಜೈನ ಧರ್ಮದವರು ಆತ್ಮವನ್ನು ನಂಬುತ್ತಾರೆ; ಆದರೆ ದೇವರನ್ನು ನಂಬುವುದಿಲ್ಲ. ಜೈನ ಮುನಿಗಳು ಬಹಳ ಬಹಳ ತಪಸ್ವೀ ಜೀವನವನ್ನು ನಡೆಸುತ್ತಾರೆ.

''ಸಾಂಪ್ರದಾಯಿಕ ಹಿಂದೂ ಮತಗಳಲ್ಲಿ ಎಲ್ಲರೂ ದಿವ್ಯದರ್ಶನವನ್ನು ನಂಬುತ್ತಾರೆ. ಕ್ರೈಸ್ತರು ಬೈಬಲ್ಲಿನಿಂದ ಬರುವ



ಪ್ರತಿಯೊಂದು ಶಬ್ದವೂ ನಿಜವೆಂದು ನಂಬುತ್ತಾರೆ. ಈ ಭಾವನೆಯನ್ನೇ ಎಲ್ಲ ಧರ್ಮಗಳಿಗೂ ವಿಸ್ತರಿಸಬಹುದು. ಹಿಂದೂಗಳ ಪುಣ್ಯಗ್ರಂಥಗಳೆಲ್ಲವೂ ಸಂಸ್ಕೃತಭಾಷೆಯಲ್ಲಿವೆ. ಅದರ ಪದಗಳು ಆಧ್ಯಾತ್ಮಿಕ ಅರ್ಥದಿಂದ ತುಂಬಿವೆ. ಹಾಗೂ ಇದರಲ್ಲಿನ ವಿಚಾರಗಳು ತರ್ಕಬದ್ಧವಾಗಿವೆ.

''ದಿವ್ಯದರ್ಶನವೆಂದರೆ ಅತೀಂದ್ರಿಯ ಅನುಭವ. ಇಂದ್ರಿಯಗಳಿಗೆ ಸಾಧ್ಯವಾಗದ್ದನ್ನು ಅನುಭವಿಸುವುದು, ಜ್ಞಾನವನ್ನು ಪಡೆದುಕೊಳ್ಳುವುದು. ಒಬ್ಬ ಮನುಷ್ಯನು ಜಗತ್ತಿನಲ್ಲಿರುವ ಧರ್ಮದ ಬಗೆಗಿನ ಎಲ್ಲ ಗ್ರಂಥಗಳನ್ನೂ ಅಧ್ಯಯನ ಮಾಡಿರಬಹುದು. ಆದರೆ ದಿವ್ಯದರ್ಶನದಿಂದ ಮಾತ್ರವೇ ಆಧ್ಯಾತ್ಮಿಕ ಅನ್ವೇಷಣೆ ಸಾಧ್ಯ.''

ಕ್ರೈಸ್ತಪಾದ್ರಿಗಳ ಕಡುವಿರೋಧದ ನಡುವೆಯೂ ಹಲವಾರು ಜನ ಪತ್ರಿಕೆಗಳಿಗೆ ಪತ್ರಗಳನ್ನು ಬರೆದು, ಸ್ವಾಮೀಜಿಯವರಿಗೆ ತಮ್ಮ ಬೆಂಬಲವನ್ನು ತೋರಿದರು. ಅವುಗಳಲ್ಲಿ ಮೂರು ಪತ್ರಗಳು ಮುಖ್ಯವಾದುವು. ಅವುಗಳಲ್ಲಿ, ಪತ್ರಗಳನ್ನು ಬರೆದವರು ಕ್ರೈಸ್ತ ಬಿಷಪ್ ನಿಂದೆ ಅವರ ನಡುವಳಿಕೆಯನ್ನು ಟೀಕಿಸಿದರಲ್ಲದೆ, ಸ್ವಾಮೀಜಿಯವರ ವ್ಯಕ್ತಿತ್ವವನ್ನು ಮತ್ತು ಅವರ ಸಿದ್ಧಾಂತವನ್ನು

ಹಾಡಿಹೊಗಳಿದರು. ಅಂಥ ಒಂದು ಪತ್ರವೊಂದು 'ಫ್ರೀ ಪ್ರೆಸ್' ಪತ್ರಿಕೆಯ ಫೆಬ್ರವರಿ ೧೮, ೧೮೯೪ರ ಸಂಚಿಕೆಯಲ್ಲಿ ಪ್ರಕಟವಾಯಿತು. ಅದರ ಒಂದು ಭಾಗವು ಹೀಗಿದೆ:

''ಹಿಂದೂ ಧರ್ಮದ ಮೂಲಭೂತ ತತ್ತ್ವವೆಂದರೆ ಇತರ ಧರ್ಮಗಳ ಕಡೆಗೆ ಸಂಪೂರ್ಣ ಸಹಾನುಭೂತಿ. ಆದರೆ ಈ ವಿಷಯದಲ್ಲಿ ಮಾನ್ಯ ಬಿಷಪ್ ನಿಂದೆ ಅವರು ಬಹಳಷ್ಟು ಅಸಹನೆಯನ್ನು ವ್ಯಕ್ತಪಡಿಸಿರುವುದು ಕಂಡುಬರುತ್ತದೆ. ಮಾನ್ಯ ಬಿಷಪ್ ಅವರು ತಾವು ಸ್ವಾಮಿ ವಿವೇಕಾನಂದರು ಯಾವುದೇ ಧಾರ್ಮಿಕ ಅಸಹನೆಯನ್ನು ತೋರುವುದಿಲ್ಲವೆಂದು ಆಶಿಸಿದ್ದರೆಂದು ತಿಳಿಸಿದ್ದಾರೆ. ಆದರೆ ಸಾಮಾನ್ಯವಾದ ಒಂದು ಪ್ರಶ್ನೆಯನ್ನು ಕೇಳುತ್ತೇವೆ. ನಮ್ಮ ಸಮಾಜದಲ್ಲಿ ನಾವು ಒಬ್ಬರು ಹಿಂದೂ ಮಿಷನರಿಯನ್ನೂ ಕಾಣುವುದಿಲ್ಲ. ಹೀಗಾಗಿ ಭಾರತಕ್ಕೆ ನೂರಾರು ಮಿಷನರಿಗಳನ್ನು ಕಳುಹಿಸುವುದನ್ನು ಹೇಗೆ ತಾನೇ ಸಮರ್ಥಿಸಿಕೊಳ್ಳುತ್ತೀರಿ?

''ಮತ್ತು ಗೌರವಾನ್ವಿತ ಸಹೋದರರು (ಸ್ವಾಮಿ ವಿವೇಕಾನಂದರು) ಬೋಧಿಸುವ ನೈತಿಕ ಶಿಕ್ಷಣದ ಗುಣಮಟ್ಟವನ್ನು ನಾವು ಅರಿತಿದ್ದೇವೆಯೆ? ಅವರು ಹೇಳುತ್ತಾರೆ, ನಾವೆಲ್ಲರೂ ನಮ್ಮ ಅಹಂಕಾರವನ್ನು ತ್ಯಜಿಸಬೇಕು; ವಿನಯವಂತಿಕೆಯನ್ನು ಬೆಳೆಸಿಕೊಳ್ಳಬೇಕು ಎಂದು. ಈ ಬೋಧನೆಯು ಉದಾತ್ತವೂ ಮತ್ತು ಶ್ರೇಷ್ಠವೂ ಆಗಿಲ್ಲವೇನು? ಮಾನವನ ಕೀಳು ಸ್ವಭಾವವನ್ನು ಸರಿಪಡಿಸುವ ಕ್ರೈಸ್ತರ ಸುವರ್ಣ ನಿಯಮದಂತೆ (Golden Rule) ಇರುವ ಉದಾತ್ತ ಬೋಧನೆಯಲ್ಲವೆ ಇದು? ಹಿಂದೂ ಧರ್ಮವು ಈ ಸುವರ್ಣ ನಿಯಮವನ್ನೂ ಮೀರುವ ತತ್ತ್ವವನ್ನು ಸಾರುವ ಆಧ್ಯಾತ್ಮಿಕ ಧರ್ಮ. ಈ ಧರ್ಮವು ತನ್ನ ಸಹವರ್ತಿಗಳನ್ನು, ಅವರು ನಿಮ್ಮನ್ನು ನಡೆಸಿಕೊಳ್ಳುವುದಕ್ಕಿಂತಲೂ ಉತ್ತಮವಾಗಿ ನಡೆಸಿಕೊಳ್ಳಬೇಕು ಎಂದು ಬೋಧಿಸುತ್ತದೆ. ಯಾರಾದರೂ ಹಿಂದೂಧರ್ಮದ ನೈತಿಕ ಶಿಕ್ಷಣವನ್ನು ಪ್ರಶ್ನಿಸಲು ಸಾಧ್ಯವೆ?''

ಮತ್ತೊಂದು ಪತ್ರವು ಇದೇ 'ಫ್ರೀ ಪ್ರೆಸ್ ಜರ್ನಲ್' ಪತ್ರಿಕೆಯ ಫೆಬ್ರವರಿ ೨೦, ೧೮೯೪ ರ ಸಂಚಿಕೆಯಂದು ಪ್ರಕಟವಾಯಿತು. ಇದರ ಬಗ್ಗೆ ಸ್ವಲ್ಪ ವಿವರಣೆ ನೀಡಬೇಕು. ಸ್ವಾಮೀಜಿ ತಮ್ಮ ಭಾಷಣದಲ್ಲಿ, ಪಾಶ್ಚಿಮಾತ್ಯ ಜನರು ಭಾರತದಲ್ಲಿ ಮದ್ಯಸೇವನೆಯನ್ನು ಇಷ್ಟೊಂದು ವ್ಯಾಪಕವಾಗಿ ಪರಿಚಯಿಸಿದರು ಎಂದು ಪ್ರತಿಪಾದಿಸಿದರು. ಇದನ್ನು ಕೆಲವರು ವಿರೋಧಿಸಿದರು. ಇದಕ್ಕೆ ಉತ್ತರವಾಗಿ ಈ ಪತ್ರದಲ್ಲಿ ಹೀಗೆ ಹೇಳಿತ್ತು:

''ಕ್ರೈಸ್ತ ದೇಶದವರು ಅತ್ಯಂತ ಉತ್ತಮ ನಾಗರಿಕತೆ ಮತ್ತು ಬೌದ್ಧ ಧರ್ಮಕ್ಕಿಂತಲೂ ಶ್ರೇಷ್ಠವಾದ ಧರ್ಮವನ್ನು ಹೊಂದಿರುವ ಮುಂದುವರಿದ ದೇಶ ಎಂದು ತಮ್ಮನ್ನು ತಾವು ಕರೆದುಕೊಳ್ಳುತ್ತಾರೆ. ಅಂಥವರು ಭಾರತದಲ್ಲಿ ಮದ್ಯಸೇವನೆಯನ್ನು ಪರಿಚಯಿಸುವುದಕ್ಕೆ ಮುಂಚೆ, ಆ ದೇಶದಲ್ಲಿ ಆ ಅನಿಷ್ಟ ಪದ್ಧತಿ ಅಷ್ಟಾಗಿ ಇರಲಿಲ್ಲ ಎನ್ನುವ ಸ್ವಾಮಿ ವಿವೇಕಾನಂದರ ಹೇಳಿಕೆಯನ್ನು ಗೌರವದಿಂದ ಒಪ್ಪಿಕೊಳ್ಳಬೇಕಾಗಿತ್ತು. ತನ್ನ ಅಳಿಸಲಾಗದ ಲಾಭದ ಆಸೆಗಾಗಿ, ಈ ಪಾಪಕೃತ್ಯವನ್ನು ಜನಗಳಲ್ಲಿ ಪ್ರಸಾರ ಮಾಡಿದ್ದನ್ನು ಅವರು ಒಪ್ಪಿಕೊಳ್ಳಬೇಕಾಗಿತ್ತು. ಇದು ನಾವು ಈಗ ಆಚರಿಸುತ್ತಿರುವ ಅಹಂಕಾರಭರಿತ ಕ್ರೈಸ್ತಧರ್ಮದ ಗುಣಮಟ್ಟಕ್ಕೆ ಹಿಡಿದ ಕನ್ನಡಿಯಾಗಿದೆ.

''ಸತ್ಯ ಹೇಳುವುದಾದರೆ, ಸ್ವಾಮಿ ವಿವೇಕಾನಂದರದು ಅತ್ಯಂತ ವಿಶಾಲವಾದ ಬೋಧನೆ. ಇದು ಪ್ರತಿಯೊಂದು ಮನುಷ್ಯನೂ ಮೋಕ್ಷ ಮತ್ತು ಸ್ವಾತಂತ್ರ್ಯಕ್ಕಾಗಿ ಪ್ರಯತ್ನಮಾಡುತ್ತಿದ್ದಾನೆ ಎಂದು ಪ್ರತಿಪಾದಿಸುತ್ತದೆ. ಇದೇ ನಿಜವಾದ ಧರ್ಮ. ಇದು ಜಾತಿ, ಮತ, ಕಂದಾಚಾರಗಳನ್ನು ಮೀರಿನಿಂತಿರುವ ಉಪದೇಶವಾಗಿದೆ. ಇಂಥ ಉದಾತ್ತ ಬೋಧನೆಯನ್ನು ಕೇಳುವ ನಮಗೆ ನಾಚಿಕೆಯಾಗಬೇಕು.''

ಡೆಟ್ರಾಯ್ಟ್ ನಗರದ ಬಹಳಷ್ಟು ಜನತೆ ಈ ಪತ್ರಗಳನ್ನು ಓದಿದರು ಮಾತ್ರವಲ್ಲ, ಅನುಮೋದಿಸಿದರು ಕೂಡ. ಇನ್ನೊಂದು ವಿಷಯ. ಸ್ವಾಮೀಜಿಯವರ ವಿರೋಧಿಗಳು ಹೇಳುವ ರೀತಿಯಲ್ಲಿ, ಸ್ವಾಮೀಜಿಯವರು ಕ್ರೈಸ್ತಧರ್ಮವನ್ನು ಅವಮಾನ ಮಾಡುವಂಥ ಟೀಕೆಟಿಪ್ಪಣಿಗಳನ್ನೇನೂ ಮಾಡಲಿಲ್ಲ. ಆಧ್ಯಾತ್ಮಿಕ ಸುಸಂಪನ್ನತೆಯಿಂದ ಕೂಡಿರುವ ಭಾರತದೇಶಕ್ಕೆ ಕ್ರೈಸ್ತ ಮಿಷನರಿಗಳು ಬಂದು ಧರ್ಮವನ್ನು ಬೋಧಿಸುವ ಆವಶ್ಯಕತೆ ಇಲ್ಲ ಎಂದಷ್ಟೇ ಅವರು ಹೇಳಿದರು. ಹಾಗೆಯೇ ಕ್ರೈಸ್ತ ಮಿಷನರಿಗಳು ಭಾರತದಲ್ಲಿರುವ ಪರಿಸ್ಥಿತಿಯನ್ನು ಅಮೆರಿಕದ ಜನಗಳ ಮುಂದೆ ತಪ್ಪಾಗಿ ಬಿಂಬಿಸಿದ್ದಾರೆ ಎಂದು ಪ್ರತಿಪಾದಿಸಿದರು. ಕ್ರೈಸ್ತಧರ್ಮ ಮಾತ್ರವೇ ಭಾರತದ ಏಕಮಾತ್ರ ಆಶಾಕಿರಣ ಎಂಬ ಕ್ರೈಸ್ತ ಪಾದ್ರಿಗಳ ವಾದವನ್ನು ಸಾರಾಸಗಟಾಗಿ ನಿರಾಕರಿಸಿದರು.

ಇನ್ನೊಂದು ಆಸಕ್ತಿಕರವಾದ ವಿಷಯವೆಂದರೆ ಭಾರತದ ಬಗ್ಗೆ ಅಮೆರಿಕನ್ನರು ಆ ಕಾಲದಲ್ಲಿ ಇಟ್ಟುಕೊಂಡಿದ್ದ ಎರಡು ಭ್ರಮೆಗಳು. ಒಂದು ಕಡೆ ಕ್ರೈಸ್ತ ಪಾದ್ರಿಗಳು ಭಾರತದವನ್ನು ಅನೈತಿಕತೆ, ವಿಗ್ರಹಾರಾಧನೆ, ಕಂದಾಚಾರಗಳ ದೇಶವೆಂದೂ, ಹೀಗಾಗಿ ಈ ದೇಶಕ್ಕೆ ಕ್ರೈಸ್ತಧರ್ಮದ ಆವಶ್ಯಕತೆ ಇದೆಯೆಂದೂ ವಾದಿಸುತ್ತಿದ್ದರು. ಇನ್ನೊಂದೆಡೆ, ಭಾರತವು ಮಹಾತ್ಮರ ನಾಡು, ಅಂಥವರು ಹಲವಾರು ಪವಾಡಗಳನ್ನು ಮಾಡಿ ತೋರಿಸಬಲ್ಲರು ಎನ್ನುವ ನಂಬಿಕೆ. ಪವಾಡಗಳ ಬಗ್ಗೆ ಅಮೆರಿಕದಲ್ಲಿ ಒಂದು ಬಗೆಯ ಹುಚ್ಚೇ ಇತ್ತು ಎಂದು ಹೇಳಬಹುದು. ಹೀಗಾಗಿ, ಡೆಟ್ರಾಯ್ಟ್ ನಗರದ ಪತ್ರಿಕೆಯಲ್ಲಿ, ಸ್ವಾಮೀಜಿ ಆಗಮಿಸುವ ಮುಂಚೆಯೇ, ಈ ವಿಷಯವಾಗಿ ಅನೇಕ ಪತ್ರಗಳು ಪ್ರಕಟವಾದುವು. 'ಈವ್‌ನಿಂಗ್ ನ್ಯೂಸ್' ಎನ್ನುವ ಒಂದು ಪತ್ರಿಕೆಯು ಸ್ವಾಮೀಜಿಯವರನ್ನು ಫೆಬ್ರವರಿ ೧೪, ೧೮೯೪ರ ತನ್ನ ಸಂಚಿಕೆಯಲ್ಲಿ ಈ ಬಗೆಯ ಶೀರ್ಷಿಕೆಯೊಂದಿಗೆ ಸ್ವಾಗತಿಸಿತು : ''ನಮಗೆ ಪವಾಡಗಳನ್ನು ನೀಡಿ.'' ಇದಕ್ಕೆ ಪ್ರತಿಯಾಗಿ ಫೆಬ್ರವರಿ ೧೬

ರಂದು 'ಫ್ರೀ ಪ್ರೆಸ್ ಜರ್ನಲ್' ಪತ್ರಿಕೆಯು ಓ.ಪಿ. ಡೆಲ್‌ಡಾಕ್ ಎನ್ನುವವರು ಸ್ವಾಮೀಜಿಯವರನ್ನು ಸಮರ್ಥಿಸಿಕೊಂಡು ಹೀಗೆ ಬರೆಯುತ್ತಾರೆ:

''ಸ್ವಾಮಿ ವಿವೇಕಾನಂದರು ಸರಳತೆಯ ಪ್ರತಿಮೂರ್ತಿ. ಅವರದು ಪ್ರತಿಭಾಶಾಲಿ ಮನಸ್ಸು. ಇದೆಲ್ಲಕ್ಕೂ ಮೆರುಗು ನೀಡುವಂತೆ ಇರುವಂಥದ್ದು ಅವರು ಧರ್ಮಗಳ ಐಕ್ಯತೆಗಾಗಿ ಮತ್ತು ವಿಶ್ವ ಭ್ರಾತೃತ್ವಕ್ಕಾಗಿ ಮಾಡುತ್ತಿರುವ ಅಗಾಧ ಪ್ರಯತ್ನ. ಇವರನ್ನು ಪವಾಡವನ್ನು ತೋರಿಸುವಂತೆ ಒತ್ತಾಯಿಸುವವರು ತಿಳಿದುಕೊಳ್ಳಬೇಕು, ವಿಶ್ವದಲ್ಲಿ ಪವಾಡವೆಂಬುದು ಏನೂ ಇಲ್ಲ, ಯಾವುದೂ ಪ್ರಕೃತಿಗೆ ಮೀರಿ ನಡೆಯುವುದಿಲ್ಲ. ಭಾರತೀಯ ವಿದ್ವಾಂಸರು ಪ್ರಕೃತಿಯ ರಹಸ್ಯಗಳನ್ನು, ಆಧ್ಯಾತ್ಮಿಕ ಜ್ಞಾನವನ್ನು ತಿಳಿದುಕೊಂಡಿದ್ದಾರೆ. ಈ ವಿಷಯದಲ್ಲಿ ಅವರು ಪಾಶ್ಚಾತ್ಯ ಜನರನ್ನು ಮೀರಿಸುತ್ತಾರೆ.

''ಕ್ರೈಸ್ತನು ಜೀವಿಸಿದ್ದಾಗ, ಅವನನ್ನು ಅಜ್ಞಾನಿ ಎಂದು ಜನರು ಹೀಯಾಳಿಸುತ್ತಿದ್ದರು. 'ಇವನನ್ನು ಶಿಲುಬೆಗೆ ಏರಿಸಿರಿ' ಎಂದು ಕೂಗುತ್ತಿದ್ದರು. 'ಪವಾಡ ಮಾಡಿ ತೋರಿಸು' ಎಂದು ಆಗ್ರಹಿಸುತ್ತಿದ್ದರು. ಇಂಥ ಅಜ್ಞಾನಿಗಳಷ್ಟೇ ಪವಾಡಗಳಿಗಾಗಿ ಒತ್ತಾಯಿಸುವುದು. ಭಾರತವಾಗಲಿ, ಅಥವಾ ಇನ್ನಾವುದೇ ದೇಶದ ಆಧ್ಯಾತ್ಮಿಕ ವ್ಯಕ್ತಿಗಳು ಪವಾಡಗಳನ್ನು ಮಾಡುತ್ತೇವೆಂದು ಮೋಸ ಮಾಡುವುದಿಲ್ಲ. ಅವರು ಅತ್ಯುತ್ತಮ ಆಧ್ಯಾತ್ಮಿಕತೆಯನ್ನು ಪ್ರದರ್ಶಿಸುತ್ತಾರೆ. ಅವರು ಬಹಳಷ್ಟು ಸಮಯದ ಉಪವಾಸ, ದೀರ್ಘ ಅಧ್ಯಯನ ಮತ್ತು ಕಾಮದ ಭಾವನೆಯನ್ನು ಕಠಿಣ ತಪಸ್ಸಿನಿಂದ ಗೆದ್ದುಕೊಂಡಿರುವುದು – ಇವುಗಳಿಂದ ಮಾತ್ರ ಆಧ್ಯಾತ್ಮಿಕ ಸುಸಂಪನ್ನತೆಯನ್ನು ಪಡೆದುಕೊಂಡಿದ್ದಾರೆ. ಪ್ರಕೃತಿಯ ಸೂಕ್ಷ್ಮಶಕ್ತಿಗಳ ಮೇಲೆ ಅವರು ಸುದೀರ್ಘ ಧ್ಯಾನ ವನ್ನು ಮಾಡುತ್ತಾರೆ. ಇದನ್ನು ನೋಡಿ, ಸಾಮಾನ್ಯ ಜನರು ಆಶ್ಚರ್ಯ ಪಡುತ್ತಾರೆ. ಇದನ್ನೇ ಅವರು ಪವಾಡ ಎಂದು ಕರೆಯುತ್ತಾರೆ.

''ಸ್ವಾಮಿ ವಿವೇಕಾನಂದರು ಶಾಂತಿ, ಪರಿಶುದ್ಧತೆ, ತ್ಯಾಗ ಮತ್ತು ಸಹೋದರ ಪ್ರೇಮಗಳ ಸಂದೇಶವನ್ನು ಹರಡುವುದರಲ್ಲಿ ಯಶಸ್ವಿಯಾಗಿದ್ದಾರೆ. ಹಾಗೆಯೇ ಸಂಕುಚಿತತೆ, ಅಸಹನೆಗಳ ಕುರುಡು ಕಣ್ಣುಗಳನ್ನು ಮುಚ್ಚಿಸುವ ಕೆಲಸವನ್ನೂ ಮಾಡುತ್ತಾರೆ. ಎಲ್ಲಕ್ಕೂ ಮೇಲಾಗಿ, ಅವರು ಮಾನವತೆಯ ಕಠಿಣ ಹೃದಯವನ್ನು ಮೃದುಗೊಳಿಸುತ್ತಿದ್ದಾರೆ. ಇವೆಲ್ಲ ಕೆಲಸಗಳಿಗೆ ಅವರು ಅರ್ಹ ವ್ಯಕ್ತಿಗಳಾಗಿದ್ದಾರೆ. ಅವರ ಈ ಉದ್ದೇಶ ಮತ್ತು ಸತ್ಕಾರ್ಯಗಳು ಖಂಡಿತವಾಗಿಯೂ ವ್ಯರ್ಥವಾಗುವುದಿಲ್ಲ.''

ಇದೇ ರೀತಿ 'ಫ್ರೀ ಪ್ರೆಸ್' ಎಂಬ ಪತ್ರಿಕೆಯಲ್ಲಿ ಪ್ರಕಟವಾದ ಪತ್ರ ಕೂಡ ಮುಖ್ಯವಾದುದು. ಅದರಲ್ಲಿ, ಸ್ವಾಮೀಜಿಯವರ ಭಾಷಣದಲ್ಲಿದ್ದ ಕೆಲವು ತಾರ್ಕಿಕ ದೋಷಗಳ ಬಗ್ಗೆ ಬರಹಗಾರನು ಮಾತನಾಡುತ್ತಾನೆ. ಆದರೆ, ತನ್ನ ಪತ್ರದ ಅಂತ್ಯದಲ್ಲಿ ಆತನು ಸ್ವಾಮೀಜಿಯವರ ಪ್ರಶಂಸೆಯನ್ನೇ ಮಾಡುತ್ತಾನೆ:

''ಈ ಹಿಂದೂವಿನ ವಿಚಾರಗಳಲ್ಲಿ ಕೆಲವು ದೋಷಗಳಿದ್ದರೂ, ಅವುಗಳಲ್ಲಿ ಬಹಳಷ್ಟು ಉತ್ತಮ ಅಂಶ ಮತ್ತು ಸತ್ಯ ತುಂಬಿದೆ. ಇವುಗಳನ್ನು ತನ್ನ ಜೀವನದಲ್ಲಿ ಅಳವಡಿಸಿಕೊಳ್ಳುವುದರಿಂದ ತಾನು ಕ್ರೈಸ್ತನೆಂದು ಕರೆಸಿಕೊಳ್ಳುವವನು ಕೂಡ ಪ್ರಯೋಜನವನ್ನು ಪಡೆದುಕೊಳ್ಳುತ್ತಾನೆ.''

ಹೀಗೆ ಪವಾಡಗಳ ಬಗ್ಗೆ ಪ್ರಕಟವಾದ ವರದಿಗೆ ತಕ್ಕ ಉತ್ತರ ದೊರಕಿದ್ದು ಸ್ವಾಮಿ ವಿವೇಕಾನಂದರಿಂದಲೇ. ಇದನ್ನು 'ಈವ್‌ನಿಂಗ್ ನ್ಯೂಸ್' ತನ್ನ ಫೆಬ್ರವರಿ ೧೭, ೧೮೯೪ರ ಸಂಚಿಕೆಯಲ್ಲಿ ಪ್ರಕಟಿಸಿತು. ಇದರ ಶೀರ್ಷಿಕೆ ಹೀಗಿತ್ತು: ''ಅದ್ಭುತಗಳೇ ಕೆಲಸ ಮಾಡುತ್ತವೆ – ಪರಿಶುದ್ಧ ಹಿಂದೂಧರ್ಮದಲ್ಲಿ ಪವಾಡಗಳಿಲ್ಲ.'' ಸ್ವಾಮೀಜಿ ಈ ವರದಿಯಲ್ಲಿ ತಮ್ಮ ನಿಲುವನ್ನು ಸ್ಪಷ್ಟಪಡಿಸುತ್ತಾರೆ:

''ಮೊದಲನೆಯದಾಗಿ, ನಾನು ಪವಾಡಮಾಡುವ ವ್ಯಕ್ತಿಯಲ್ಲ. ಎರಡನೆಯದಾಗಿ, ಪರಿಶುದ್ಧ ಹಿಂದೂಧರ್ಮವು ಪವಾಡಗಳ ಮೇಲೆ ನಿಂತಿಲ್ಲ. ನಾವು ಯಾವುದೇ ಘಟನೆಯನ್ನು ಪವಾಡವೆಂದು ಪರಿಗಣಿಸುವುದಿಲ್ಲ. ಈ ಐದು ಇಂದ್ರಿಯಗಳ ಆಚೆಗೆ ನಡೆಯುವ ಅನೇಕ ಅದ್ಭುತ ಘಟನೆಗಳಿವೆ. ಅವು ಯಾವುದೋ ಒಂದು ನಿಯಮದ ಪ್ರಕಾರ ನಡೆಯುತ್ತವೆ. ಆದರೆ ನಮ್ಮ ಧರ್ಮವು ಈ ಬಗೆಯ ಅದ್ಭುತಗಳ ಮೇಲೆ ನಿಂತಿಲ್ಲ. ಆದರೆ ಭಾರತ ದೇಶದಲ್ಲಿ ನಡೆಯುವ ಅನೇಕ ವಿಚಿತ್ರ ಸಂಗತಿಗಳನ್ನು ವಿದೇಶೀ ಪತ್ರಿಕೆಗಳು ವರದಿ ಮಾಡುತ್ತವೆ. ಅವುಗಳನ್ನು ಯಾವುದೋ ಪವಾಡಗಳೆಂಬಂತೆ ಮತ್ತು ಸಂಮೋಹನೆಯ ಭ್ರಮೆಯೆಂಬಂತೆ ಬಿಂಬಿಸುತ್ತವೆ. ಇವುಗಳನ್ನು ಆಧ್ಯಾತ್ಮಿಕ ವ್ಯಕ್ತಿಗಳು ಮಾಡುವುದಿಲ್ಲ.''

ಹೀಗೆ ಈ ವಿಚಾರಕ್ಕೆ ಅಂತ್ಯ ಬಿತ್ತು. 'ಈವ್‌ನಿಂಗ್ ನ್ಯೂಸ್' ಪತ್ರಿಕೆಯು ತನ್ನ ಫೆಬ್ರವರಿ ೨೦ರ ಸಂಪಾದಕೀಯದಲ್ಲಿ ಈ ಬಗ್ಗೆ ಬರೆದುಕೊಂಡಿತು:

''ಈ ವಾರ್ತೆಯು ಡೆಟ್ರಾಯ್ಟ್ ನಗರದ ಜನತೆಗೆ ಹಿಂದೂ ಸಂನ್ಯಾಸಿಯ ಭೇಟಿಯ ವಿಷಯದಲ್ಲಿ ಬಹಳ ಒಳಿತನ್ನೇ ಮಾಡಿತು ಎನ್ನಬೇಕು. ಸ್ವಾಮಿ ವಿವೇಕಾನಂದರು ಹೇಳುತ್ತಾರೆ, ಹಿಂದೂಧರ್ಮದ ಸತ್ಯವು ಈ ಬಗೆಯ ಅದ್ಭುತಗಳ ಮೇಲೆ ನಿಂತಿಲ್ಲ ಎಂದು. ಹಾಗೂ, ಅವರು ತಾವೊಬ್ಬ ಪವಾಡಪುರುಷರು ಎಂದು ಹೇಳಿಕೊಳ್ಳುವುದೂ ಇಲ್ಲ.''

ಹೀಗೆ ಒಂದೇ ಹೊಡೆತದಲ್ಲಿ, ಭಾರತವು ಮಂತ್ರಮಾಟಗಳ ದೇಶವೆಂಬ ಕಪ್ಪುಪಟ್ಟಿಯನ್ನು ಸ್ವಾಮಿ ವಿವೇಕಾನಂದರು ಅಳಿಸಿ ಹಾಕಿದರು. ಇದಕ್ಕಾಗಿ ಅವರು ಥಿಯೋಸಫಿಸ್ಟರ ಮತ್ತು ಕ್ರೈಸ್ತ ಮಿಷನರಿಗಳ ದ್ವೇಷಕ್ಕೆ ಒಳಗಾಗಬೇಕಾಯಿತು.

*(ಮುಂದುವರಿಯುವುದು)*